



## ಪರಿಹಾರ

ಕೃಷ್ಣ
ನಾಪತ್ತೆಯಾದ
ಸುದ್ದಿ
ಬಲುಬೇಗ
ಭಾಮೆಯ
ತಲುಪಿತು
ಅವನು
ಬರಲಿ ಎಂದು
ಅವಳು ಹಲ್ಲು
ಕಡಿದಳು
ಧಗಧಗ
ಉರಿದಳು
ಆಕೆಯ ನೋಟಕ್ಕೆ
ಸಿಕ್ಕ ಕನ್ನಡಿ
ಸಾವಿರ ಚೂರು
ಆಗ
ಕೃಷ್ಣ
ಯಮುನೆಯಲ್ಲಿ
ತಾಪ
ಇಳಿಸಿಕೊಳ್ಳುತ್ತಿದ್ದ.

## ಆಟ

ಯಾವಾಗಲೂ
ತಪ್ಪು ಗರ
ತಪ್ಪು ನಡೆ
ಮೋಸದಾಟ
ಈ ಕೃಷ್ಣನದು
ಎಂದು ಆಡಿ
ಆಡಿ ಸೋತ
ರಾಧೆ
ಇನ್ನೂ ಮುಳುಗದ
ಸೂರ್ಯನನ್ನೆ
ಬೈದಳು.

## ಫಲಿತಾಂಶ

ಸೋತು
ಸುಣ್ಣವಾಗಿದ್ದ
ಭಾಮೆಯನ್ನು
ಮುಕುಂದ
ಬೇಕೆಂದೆ
ಗೆಲ್ಲಿಸಿದ
ಆಗ
ಬೇಗ
ರಾತ್ರಿಯಾಯಿತು.

## ಬಣ್ಣ

ಯಮುನೆಯ
ನೀರು ಕಪ್ಪೋಕಪ್ಪು
ಆಗದೇ ಇನ್ನೇನು?
ನಿನ್ನೆ ಅಲ್ಲಿ
ಕೃಷ್ಣ ಮುಳುಗಿದ್ದನಂತೆ!

